ಕಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಪ್ರಹ್ಲಾದಾಚಾರ್ರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ತಂಕೆರೆ ತಾಲ್ಲೂಕು ಆಫೀಸಿನಲ್ಲಿ 1910ನೆ ಜನವರಿ 27ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಶುರುಮಾಡಲ್ಪಡುತ್ತೆ. ಸ್ವತ್ತು ವಿಕ್ರಯಂ ಚೌದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಪ್ಪುಯಲ್ಲಿ ನಮೂದಿಸಿರುವ ತಪ್ಪೀಲ್ ಮೇರಿಗೆ ರೂಪಾಯಿ 58—11—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳಿ ಸನೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮುಂಜಾರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮುಂಜಾರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಣಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು: —

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಮುಸ್ಸೀ, ತರೀ, ಅಥವಾ ಬಾಗಾಯತು.	ವಿಸ್ತೀರ್ಣ.	ಪ್ರಕಾರ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಾಲಿಯನಾ ಕೊಡಬೇಕಾದ ಜೋಡಿ ಯೂ ಜಾಯಂಗಂಟಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋ ಟಿಸ್ ಫೀ ಜಗ್ಗೆಲಿ ಸಹಿತವಾದ ಬಾಕಿ ಮೊತ್ತಗಳು.
ತೀರ್ಕೆರೆ	ಕಿನಕೆ	ಯಳ್ಳೆಗೊಂದಿ ಜೋಡಿ ಗ್ರಾಮ	ಪ್ರಹ್ಲಾದಾಚಾರ್	...	...	...	...	ರೂ. ಆ. ಪೈ. 130 15 2	ರೂ.	ರೂ. 500	ರೂ. ಆ. 49 8 ಜೋಡಿ. ಲೋಕಲ್ ಸೆಸ್. 8 ೮	ರೂ. ಆ. ಪೈ. ... 57 11 0 ... 0 8 0 ... 0 8 0 58 11 0

ಜೋಡಿ ನೋಟೀಸ್ ಫೀ ಇನ್ಸ್ಪೆಕ್ಟರ್

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.